ದಿವಸಗಳಿಂದ ಸಂದರ್ಶನ ಸಮಿತಿಯಲ್ಲಿ ಇದ್ದಾರೆ. ಅವರಿಗೆ ಟೆಲಿಫೋನ್ ಮಾಡಿದರೆ, ಅವರು ಟೆಲಿಫೋನ್‌ಗೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಅವರು ಉದ್ದೇಶ ಪೂರ್ವಕವಾಗಿ ಟೆಲಿಫೋನಿಗೆ ಸಿಕ್ಕುತ್ತಿಲ್ಲವೆಂದು ಹೇಳುವುದು ಸರಿಯಲ್ಲ. ಅವರು ತಪ್ಪು ಜೊತೆಯಲ್ಲಿ ಮಾತನಾಡಬಾರದು ಎಂದು ಆ ರೀತಿ ಮಾಡುತ್ತಾ ಇಲ್ಲ. ಇನ್ನು ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ್‌ರವರು ಇಂಜನೀಯರಿಂಗ್ ಕಾಲೇಜಿಗೆ ಪ್ರವೇಶ ಸಿಕ್ಕುತ್ತಿಲ್ಲ, ಬಹಳ ತೊಂದರೆಯಾಗಿದೆ ಎಂದು ಹೇಳಿದರು. ಇದು ಸಮರ್ಪಕವಾಗಿ ಉತ್ತರವನ್ನು ಈ ಸಮಯದಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರಾದ ಅಜೀಜ್ ಸೇಠ್‌ರವರಿಗೆ ನಾನು ಕೊಟ್ಟ ಉತ್ತರದಿಂದ ಸಮಾಧಾನವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ತಾಂತ್ರಿಕ ಕಾಲೇಜು ಮತ್ತು ತಾಂತ್ರಿಕ ಶಾಲೆಗಳಲ್ಲಿ ಸಂದರ್ಶನ ಸಮಿತಿ ಮಾಡಿದ್ದೇವೆ, ಅದರ ಮುಖಾಂತರ ಅಡ್ಮಿಷನ್ ಪಡೆಯಬಹುದು. ಅಲ್ಲಿ ಪಡೆಯಲಿಕ್ಕೆ ಸಾಧ್ಯವಿಲ್ಲವೆಂದು ಎಲ್ಲರೂ ವಿಶೇಷವಾದ ರೀತಿಯಲ್ಲಿರುವ ಕೇವಲ ೧೬ ಸೀಟುಗಳನ್ನು ಏನು ಸರ್ಕಾರ ಇಟ್ಟುಕೊಂಡಿದೆ ಅದರಲ್ಲಿ ಎಲ್ಲರಿಗೂ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು ೨೦೦ಕ್ಕೂ ಮೇಲ್ಪಟ್ಟು ರಿಕ್ವೆಸ್ಟ್‌ಗಳು ಮಾನ್ಯ ಸದಸ್ಯರ ಮುಖಾಂತರ ಬಂದಿವೆ. ಇನ್ನೂ ಅನೇಕ ಪ್ರತಿಷ್ಠಿತರಿಂದ ಬಂದಿವೆ ಈ ಎಲ್ಲರಿಗೂ ಯಾವ ರೀತಿಯಿಂದ ಕೊಡಲಿಕ್ಕೆ ಸಾಧ್ಯವೆನ್ನುವುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು.

ಅಧ್ಯಕ್ಷರು.— ಈಗ ಮಾನ್ಯ ಸದಸ್ಯರಾದ ಆತ್ಮಾನಂದ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಬಹುದು.

PAPERS LAID ON THE TABLE

SECRETARY.—Sir, I beg to lay on the Table of the House.

"the Sixth List of Unstarred Questions and Answers of the First Session."

MR. SPEAKER.—Papers are laid.

OFFICIAL RESOLUTION

re : Vijayanagar Steel Plant-Thanking the Govt of India for providing Rs. 30 crores in the Central Budet.

ಶ್ರೀ ಆರ್ ಗುಂಡೂರಾವ್. (ಮಾನ್ಯ ಮುಖ್ಯಮಂತ್ರಿಗಳು)—ಮಾನ್ಯ ಅಧ್ಯಕ್ಷರೇ ನೆನ್ನೆದಿವಸ ನಾನು ಒಂದು ರೆಸಲ್ಯೂಷನ್ ಮೂವ್ ಮಾಡುತ್ತೇನೆಂದು ಹೇಳಿದ್ದೆ ಅದು ಏನು ಎಂದರೆ, ವಿಜಯನಗರದ ಸ್ಟೀಲ್ ಪ್ಲಾಂಟ್ ವಿಷಯದಲ್ಲಿ.

Sir, may I refer to the discussions in the House on Friday the 25th July, 1980 when the Hon'ble Member Sri Bhaskar Naidu draw the attention of the House to the reported statement of the Union Finance Minister that the Government of India has provided a sum of Rs. 30-00 crores in this year's budget for the work on the Vijayanagar Steel Plant ? Several members of the House both from the Treasury and Opposition Benches welcomed this decison of the Government of India and suggested that it would be appropriate, in the circumstances, to convey to the Government of India through the Hon'ble Prime Minister by a resolution of the House its appreciation and support of the decision of the Government to make a substantial

investment in the Vijayanagar Steel Plant. Members are aware that the Government of Karnataka has been pressing for some years for the establishment of a major integrated steel plant and in fact eversince the foundation stone for this plant was laid in October, 1971, Vijayanagar has become an embodiment of the aspirations of the people of Karnataka. In deference to the sentiments and wishes of the Hon'ble Members, I have pleasure in proposing the following resolution to be passed by this august Assembly.

RESOLUTION

RESOLVED that we, the Members of the Karnataka Vidhana Sabha do hereby unanimously resolve to convey our appreciation to the Hon'ble Prime Minister of India and through her to the Government of India on their decision to allocate a sum of Rs. 30.00 crores for the Vijayanagar Steel Plant during the current year. In passing this resolution, we express the hope that the Government of India will proceed expeditiously with the execution of this major project for the benefit of the people of the State and the country.

11-00 A.M.

ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದನೆ ಮಾಡಿ ಕೇಂದ್ರ ಸರ್ಕಾರಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ.

MR. SPEAKER.—The resolution is adopted.

ಶ್ರೀ ಕೆ. ರಾಮಭಟ್ —ನಾವು ಕೂಡ ಅಭಿನಂದನೆ ಸಲ್ಲಿಸಲು ಅವಕಾಶವನ್ನು ಕೊಡಬೇಕಾಗಿತ್ತು, ತಾವು ಕೆಟ್ಟ ಸಂಪ್ರದಾಯವನ್ನು ಹಾಕುತ್ತಿದ್ದೀರಿ.

MR. SPEAKER.—When the resolution is adopted, there is no necessity for the speech.

ಶ್ರೀ ಕೆ. ರಾಮಭಟ್.—ಈ ಯೋಜನೆ ೧೯೭೨ರಲ್ಲೇ ಶುರು ಆಯಿತು. ಆಗ ೪೫೦ ಕೋಟಿ ಇತ್ತು. ಈಗ ೭೫೦ ಕೋಟಿ ಖರ್ಚು ಹೇಳುತ್ತಿದ್ದೀರಿ. ಹೀಗೆ ಎಷ್ಟು ದಿವಸ ಮುಂದುವರಿಸಿಕೊಂಡು ಹೋಗುತ್ತೀರಿ, ಎಷ್ಟು ಖರ್ಚಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

CALLING ATTENTION TO MATTERS OF URGENT PUBLIC IMPORTANCE

re : Non-implementation of HUDCO Scheme houses at Mandya City.

SRI M.S. ATHMANANDA.—Sir, I call the attention of the Minister for Housing and Urban Development to the situation arising due to non-implementation of HUDCO Scheme Houses at Mandya City.

SRI DHARM SINGH. (Minister for Housing & Urban Development) I wish to make the following Statement.